# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಶ್ರೀ ಎಸ್.ಎಸ್.ಗಂಗಾಧರಪ್ಪ, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ ಭದ್ರಾವತಿ ಹಾಗೂ ಶ್ರೀ ಎ.ಜಿ. ರಾಜೇಂದ್ರ ಕುಮಾರ್, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಎಡೇಹಳ್ಳಿ ಗ್ರಾಮ ಪಂಚಾಯತಿ ಇವರ ವಿರುದ್ಧದ ಶಿಸ್ತು ಕ್ರಮ – ಅಂತಿಮ ಆದೇಶ.

ಓದಲಾಗಿದೆ: 1) ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ 182 ವಿಸೇಬಿ 2015, ದಿ:14-08-2015.

2) ಮಾನ್ಯ ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರ ಅ.ಸ.ಪತ್ರ ಸಂಖ್ಯೆ:ಉಪಲೋಕ್-2/ಡಿಇ/447/2015/ಎಆರ್ಇ-1 ದಿನಾಂಕ: 10-11-2016.

-ooo-

**ಪ್ರಸ್ತಾವನೆ:**

ಮೇಲೆ ಓದಲಾದ (1)ನೇ ಸರ್ಕಾರಿ ಆದೇಶದಲ್ಲಿ ಎಡೇಹಳ್ಳಿ ಗ್ರಾಮದ ಸರ್ವೆ ನಂ. 22 ರಲ್ಲಿ ಒಂದು ಎಕರೆ ಜಾಗವನ್ನು ಸಂತೆ ಮೈಧಾನಕ್ಕಾಗಿ ಕಾಯ್ದಿರಿಸಿದ್ದು, ಸದರಿ ಜಮೀನಿನ ಪೈಕಿ ಜಿಲ್ಲಾಧಿಕಾರಿಗಳ ಷರತ್ತನ್ನು ಉಲ್ಲಂಘಿಸಿ 30x80 ಅಡಿ ಜಾಗವನ್ನು ಎಡೇಹಳ್ಳಿ ಲಯನ್ಸ್ ಕ್ಲಬ್ಬಿಗೆ ಖಾತೆ ಮಾಡಲು ಕ್ರಮವಹಿಸಿ/ಆದೇಶಿಸಿ ಕರ್ತವ್ಯ ಲೋಪ ಎಸಗಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ ಶ್ರೀ ಎಸ್.ಎಸ್. ಗಂಗಾಧರಪ್ಪ ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ ಭದ್ರಾವತಿ ಮತ್ತು ಶ್ರೀ ಎ.ಜಿ. ರಾಜೇಂದ್ರಕುಮಾರ್ ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಎಡೇಹಳ್ಳಿ ಗ್ರಾಮ ಪಂಚಾಯತಿ, ಭದ್ರಾವತಿ ರವರುಗಳ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ವ.ನಿ.ಮೇ) ನಿಯಮಾವಳಿಗಳ ನಿಯಮ 1957 14(ಎ)ರ ಅಡಿ ಪ್ರಕರಣವನ್ನು ಮಾನ್ಯ ಕರ್ನಾಟಕ ಲೋಕಾಯುಕ್ತರವರಿಗೆ ವಹಿಸಲಾಗಿತ್ತು.

ಆದರಂತೆ ಮಾನ್ಯ ಲೋಕಾಯುಕ್ತರು ಪ್ರಕರಣಕ್ಕೆ ಸಂಬಂಧಿಸಿದಂತೆ ವಿವರವಾಗಿ ವಿಚಾರಣೆಯನ್ನು ನಡೆಸಿ ಈ ಕೆಳಕಂಡಂತೆ ಮೇಲೆ ಓದಲಾದ(2)ರ ಪತ್ರದಲ್ಲಿ ಶಿಫಾರಸ್ಸು ಮಾಡಿರುತ್ತಾರೆ.

- Considering the findings of the Inquiry Officer that DGOs 1 & 2 were not the officers who were working at the relevant point of time, it is hereby recommended to the Government that, the disciplinary proceedings against the DGOs – Sriyuths: (1)S.S.Gangadharappa the then Executive Officer abd (2) A.G. Rajendrakumar, Panchayath Development Officer, Edehalli Gram Panchayath, Bhadravathi Taluk, be 'dropped as' not proved.

ಮುಂದುವರಿಯುತ್ತಾ ಆಪಾದಿತ ನೌಕರರು ಪಂಚಾಯಿತಿ ಆಸ್ತಿ ಪರಬಾರಿ ಮಾಡುವಲ್ಲಿ ಜವಾಬ್ದಾರರಲ್ಲದ ಕಾರಣ ಅವರ ಹಿಂದೆ ಇದ್ದ ತಪ್ಪಿತಸ್ಥ ಅಧಿಕಾರಿ / ನೌಕರರು

..2..

ಯಾರು ಎಂಬ ಬಗ್ಗೆ ಗುರ್ತಿಸಿ ಅವರ ವಿರುದ್ಧ ದೋಷಾರೋಪಣ ಪಟ್ಟಿಯನ್ನು ಸರ್ಕಾರಕ್ಕೆ ಸಲ್ಲಿಸುವಂತೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಶಿವಮೊಗ್ಗ ರವರಿಗೆ ಕ್ರಮವಹಿಸಲು ಸೂಚಿಸಲು ಸರ್ಕಾರವು ತೀರ್ಮಾನಿಸಿದೆ. ಅದರಂತೆ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ 12 ವಿಸೇಬಿ 2017 ಬೆಂಗಳೂರು ದಿನಾಂಕ:09-11-2017

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದ ಸರ್ಕಾರವು ಶ್ರೀ ಎಸ್.ಎಸ್.ಗಂಗಾಧರಪ್ಪ, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ ಭದ್ರಾವತಿ ಹಾಗೂ ಶ್ರೀ ಎ. ಜಿ.ರಾಜೇಂದ್ರ ಕುಮಾರ್, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಎಡೇಹಳ್ಳಿ ಗ್ರಾಮ ಪಂಚಾಯತಿ ಇವರುಗಳ ವಿರುದ್ಧ ಮಾನ್ಯ ಲೋಕಾಯುಕ್ತರು ದಿ:09-09-2015 ರಂದು ಜಾರಿಗೊಳಿಸಿರುವ ದೋಷಾರೋಪಣೆಗಳಿಂದ ದೋಷಮುಕ್ತಗೊಳಿಸಿ ಆದೇಶಿಸಿದೆ.

ಮುಂದುವರಿಯುತ್ತಾ ಆಪಾದಿತ ಅಧಿಕಾರಿ/ನೌಕರರು ಪಂಚಾಯಿತಿ ಆಸ್ತಿ ಪರಬಾರಿ ಮಾಡುವಲ್ಲಿ ಜವಾಬ್ದಾರರಲ್ಲದ ಕಾರಣ ಅವರ ಹಿಂದೆ ಇದ್ದ ತಪ್ಪಿತಸ್ಥ ಅಧಿಕಾರಿ/ನೌಕರರು ಯಾರು ಎಂಬ ಬಗ್ಗೆ ಗುರ್ತಿಸಿ ಅವರ ವಿರುದ್ಧ ದೋಷಾರೋಪಣ ಪಟ್ಟಿಯನ್ನು ಸರ್ಕಾರಕ್ಕೆ ಸಲ್ಲಿಸುವಂತೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಶಿವಮೊಗ್ಗ ರವರಿಗೆ ಕ್ರಮವಹಿಸಲು ಸೂಚಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

9/11/17

(ಡಿ.ಎಸ್.ವಿಜಯ್)
ಸರ್ಕಾರದ ಅಧೀನ ಕಾರ್ಯದರ್ಶಿ,(ಸೇ-ಬಿ&ಸಿ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಗೆ:

1. ಮಹಾಲೇಖಪಾಲರು, (ಎ&ಇ) ಕರ್ನಾಟಕ, ಬೆಂಗಳೂರು.
2. ಮಾನ್ಯ ಉಪಲೋಕಾಯುಕ್ತ, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
3. ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು
4. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಶಿವಮೊಗ್ಗ.
5. ಸಂಬಂಧಿಸಿದ ಅಧಿಕಾರಿ/ನೌಕರರಿಗೆ (ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಶಿವಮೊಗ್ಗ ಇವರ ಮುಖಾಂತರ).

ಪ್ರತಿಯನ್ನುಮಾಹಿತಿಗಾಗಿ:
1)ಸರ್ಕಾರದ ಪ್ರಧಾನ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ(ಪಂ.ರಾಜ್)/ಜಂಟಿ ಕಾರ್ಯದರ್ಶಿ(ಆಡಳಿತ),ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಇವರ ಆಪ್ತ ಶಾಖೆಗೆ. 2) ವಿಶೇಷಾಧಿಕಾರಿ, ಗಣಕ ಕೋಶ,ಗ್ರಾ.ಅ.ಪಂ.ರಾಜ್ ಇಲಾಖೆ.(3) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.